

# ಬರಲಿವೆ ಮೇಡ್ ಇನ್ ಸ್ಪೇಸ್ ಉತ್ಪನ್ನಗಳು

ಆನ್‌ಲೈನ್ ಪೇಟೆ, ಮಾಲ್ ಅಥವಾ ಮಳಿಗೆಗಳಲ್ಲಿ ಯಾವುದೇ ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ಕೊಳ್ಳುವ ಮೊದಲು, ಅದು ಯಾವ ವರ್ಷ ಮತ್ತು ಎಲ್ಲಿ ತಯಾರಾಗಿದೆ ಎಂದು ಗಮನಿಸುತ್ತೇವೆ. ದುಬಾರಿ ಹಣ ಕೊಟ್ಟು ಕೊಳ್ಳುವ ವಸ್ತುಗಳಾದರೆ ಅದರ ಮೇಲೆ 'ಮೇಡ್ ಇನ್ ಯುಎಸ್‌ಎ', 'ಮೇಡ್ ಇನ್ ಕೊರಿಯ', 'ಮೇಡ್ ಇನ್ ಹಾಂಕಾಂಗ್', 'ಮೇಡ್ ಇನ್ ಜಪಾನ್' ಎಂದಿದ್ದರೆ ಕೆಲವರಿಗೆ ಒಂದುಬಗೆಯ ನೆಮ್ಮದಿ. 'ಮೇಡ್ ಇನ್ ಚೈನಾ' ಎಂದಿದ್ದರೆ ಅನುಮಾನಿಸುತ್ತ, ಗೇಲಿ ಮಾಡುತ್ತ, ಕಡಿಮೆ ಬೆಲೆ ಎಂದು ಒಳಗೊಳಗೇ ಆನಂದಿಸುತ್ತ ಒಂದರ ಬದಲು ನಾಲ್ಕನ್ನು ಕೊಳ್ಳುವವರ ಸಂಖ್ಯೆಯೂ ಕಡಿಮೆಯೇನಿಲ್ಲ. ಆಗಾಗ ನಮ್ಮ ದೇಶದ 'ಮೇಡ್ ಇನ್ ಇಂಡಿಯಾ' ಟ್ಯಾಗ್ ಇರುವ ಉತ್ಪನ್ನಗಳನ್ನೂ ಶಾಪಿಂಗ್ ಮಾಡುತ್ತೇವೆ. ಈ ಪಟ್ಟಿಯಲ್ಲಿ 'ಮೇಡ್ ಇನ್ ಸ್ಪೇಸ್' ಎನ್ನುವ ಬರಹ ಇರುವ ಟ್ಯಾಗ್ ಮುಂದಿನ ದಿನಗಳಲ್ಲಿ ಎದುರಾದರೆ ಆಶ್ಚರ್ಯ ಪಡಬೇಕಿಲ್ಲ.

◆ 'ಮೇಡ್ ಇನ್ ಸ್ಪೇಸ್' – ಹಾಗೆಂದರೇನು?

ಯಾವ ದೇಶಕ್ಕೂ ಸೇರದ, ಆದರೆ ಇಡೀ ವಿಶ್ವಕ್ಕೆ ಸಂಬಂಧಿಸಿದ ಉತ್ಪನ್ನ ಎನ್ನುವುದನ್ನು ಈ 'ಮೇಡ್ ಇನ್ ಸ್ಪೇಸ್' ಸೂಚಿಸುತ್ತದೆ. ಈ ಬ್ರ್ಯಾಂಡ್ ಅಡಿಯಲ್ಲಿ, ಭೂಮಿಯಿಂದ ಸುಮಾರು 260 ಮೈಲಿ ದೂರದಲ್ಲಿದ್ದು, ಪ್ರತೀ ಒಂದೂವರೆ ತಾಸಿಗೊಮ್ಮೆ ಭೂಮಿಯ ಸುತ್ತ ಪ್ರದಕ್ಷಿಣೆ ಹಾಕುವ 'ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ'ದಲ್ಲಿ ತಯಾರಾಗಿರುವ ಉತ್ಪನ್ನಗಳು ನಮಗೆ ಸಿಗಲಿವೆ. ಅದರಲ್ಲೂ ಮನುಷ್ಯನ ಆರೋಗ್ಯಕ್ಕೆ ಸಂಬಂಧಿಸಿದ ಹಲವು ಪರಿಕರಗಳು ಅಲ್ಲಿನ ಶೂನ್ಯ ಗುರುತ್ವದಲ್ಲಿ ಯಾವ ವಕ್ರತೆಯೂ, ಕೊರತೆಯೂ ಇಲ್ಲದೆ ತಯಾರಾಗಿ ಭೂಮಿಗೆ ಬರುವ ಕಾಲ ಹತ್ತಿರವಾಗಿದೆ.

ಚಂದ್ರ, ಮಂಗಳ ಮತ್ತು ಅಂತರಿಕ್ಷಯಾನಗಳಲ್ಲಿ ಮೊದಲಿನಿಂದಲೂ ಅಪಾರ ಆಸಕ್ತಿ ಹೊಂದಿರುವ ಮನುಷ್ಯ ಬಾಹ್ಯಾಕಾಶ ಕೇಂದ್ರಕ್ಕೆ ಪ್ರಯಾಣಿಸಿ, ಪ್ರಯೋಗ ಮಾಡಿ, ವಿಶ್ವದ ಸಂರಚನೆಯ ಬಗ್ಗೆ ಇನ್ನೂ ಖಚಿತವಾಗಿ ತಿಳಿದುಕೊಳ್ಳಲು ಮತ್ತು ಸಾಧ್ಯವಾದರೆ ಅಲ್ಲಿಯೇ ನೆಲೆಸಲು ಒಂದಿಲ್ಲೊಂದು ಪ್ರಯತ್ನ ಮಾಡುತ್ತಲೇ ಇದ್ದಾನೆ. ಮನುಷ್ಯ ಚಂದ್ರನ ಮೇಲೆ ಕಾಲಿಟ್ಟು ಆರು ದಶಕಗಳೇ ಕಳೆದಿವೆ. ತಿಂಗಳಿಗೊಂದು ರಾಕೆಟ್ ಉಡಾವಣೆಗೊಂಡು ಗಗನಯಾನಿಗಳು ವಿದೇಶ ಪ್ರವಾಸ ಮಾಡಿದಷ್ಟೇ ಸಲೀಸಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿ ಬರುತ್ತಿದ್ದಾರೆ. ವರ್ಷಕ್ಕೆರಡು ಬಾರಿ ಅಂತರಿಕ್ಷ ಪ್ರವಾಸ ಏರ್ಪಡಿಸುವ ಉಮೇದಿನಲ್ಲಿರುವ ಟೆಸ್ಲಾ ಕಂಪನಿಯ ಎಲಾನ್ ಮಸ್ಕ್, ಇತ್ತೀಚೆಗೆ ಇಬ್ಬರನ್ನು ಅಂತರಿಕ್ಷಕ್ಕೆ ಕಳುಹಿಸಿಕೊಟ್ಟಿದ್ದಾರೆ.

ಪ್ರತೀ ಬಾರಿ ಅಂತರಿಕ್ಷಕ್ಕೆ ಹಾರುವ ರಾಕೆಟ್‌ಗಳು ತಮ್ಮೊಡಲಿನಲ್ಲಿ ಭವ್ಯವಾದ ಪ್ರಯೋಗಾಲಯಗಳನ್ನು ಅಡಗಿಸಿಕೊಂಡಿರುತ್ತವೆ. ಆ ರಾಕೆಟ್‌ಗಳ ಜೊತೆಗೆ ಪಯಣಿಸುವ ವಿಜ್ಞಾನಿಗಳು, ಭೂಮಿಯ ಮೇಲೆ ತಾವು ಕೈಗೊಂಡ ಯಾವ ಯಾವ ಪ್ರಯೋಗಗಳಿಗೆ ಖಚಿತ ಉತ್ತರ ಸಿಕ್ಕಿಲ್ಲವೋ ಅವುಗಳಿಗೆ ಸಂಬಂಧಪಟ್ಟ ಸಲಕರಣೆಗಳನ್ನೆಲ್ಲ ತಮ್ಮೊಂದಿಗೆ ಒಯ್ಯುತ್ತಾರೆ. ಅತ್ಯಂತ ಕಡಿಮೆ ಗುರುತ್ವಬಲ ಮತ್ತು ನಿರ್ವಾತ ಪ್ರದೇಶ ಸೂಕ್ಷ್ಮ ಸಂಶೋಧನೆಗಳಿಗೆ ಹೇಳಿ ಮಾಡಿಸಿದ ವಾತಾವರಣ ಎನ್ನುವ ಸಂಶೋಧಕರು, ಈಗಾಗಲೇ ಅಂತಹ ಅನೇಕ ಪ್ರಯೋಗಗಳನ್ನು ಕೈಗೊಂಡು ಹೊಸ ಸಾಧ್ಯತೆಗಳನ್ನು ಕಂಡು ಕೊಂಡಿದ್ದಾರೆ.

ಅಂತರಿಕ್ಷಕ್ಕೇರುವ ವಾಹನಗಳ ಸಂಖ್ಯೆ ಹೆಚ್ಚಿದಂತೆಲ್ಲ, ಸಸ್ಯಗಳ ಬೆಳವಣಿಗೆಗೆ ಸಂಬಂಧಪಟ್ಟ ಪ್ರಯೋಗಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೈಗೊಂಡು – ಗೋಧಿ, ಉದ್ದಿನಬೇಳೆ, ಬಟಾಣಿ, ಈರುಳ್ಳಿ, ಹುರುಳಿ, ಕೊತ್ತಂಬರಿ ಸೊಪ್ಪಿನಂತಹ ತರಕಾರಿಗಳನ್ನು ಬೆಳೆದ ಮನುಷ್ಯ, 'ಗ್ರೀನ್ ಸ್ಪೇಸ್' ಎಂಬ ಹೊಸ ಲೋಕವನ್ನು ಸೃಷ್ಟಿ ಮಾಡಿ ದಶಕಗಳೇ ಕಳೆದಿವೆ. ತೀರಾ ಇತ್ತೀಚೆಗೆ 328 ದಿನಗಳ ದೀರ್ಘ ವಾಸ್ತವ್ಯ ಮಾಡಿ, ಅಂತರಿಕ್ಷದಿಂದ ಹಿಂದಿರುಗಿದ ಕ್ರಿಸ್ಟಿನಾ ಕೋಚ್ ಸಸ್ಯ ಹಾಗೂ ಪ್ರಾಣಿ ಜನ್ಯ ಅಂಗಾಂಶಗಳ ಬಯೋಫ್ಯಾಬ್ರಿಕೇಶನ್‌ನ ಮೇಲೆ ಶೂನ್ಯ ಗುರುತ್ವ ಯಾವ ರೀತಿಯ ಪರಿಣಾಮ ಉಂಟುಮಾಡುತ್ತದೆ ಎಂಬುದನ್ನು ಪ್ರಯೋಗಗಳ ಮೂಲಕ ಕಂಡುಕೊಂಡಿದ್ದರು; ಬಾಹ್ಯಾಕಾಶದ ಶೂನ್ಯ ಗುರುತ್ವದ ವಾತಾವರಣ ಭೂಮಿಯ ಸೆಳೆತದ, ಭಾರದ ಗುರುತ್ವಯುತ ಕ್ಷೇತ್ರಕ್ಕಿಂತಲೂ ತುಂಬಾ ಭಿನ್ನ ಮತ್ತು ಅನುಕೂಲಕರ ಎಂದು ಪ್ರತಿಪಾದಿಸಿದ್ದರು. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿರುವ ಗಗನಯಾನಿ ಸಂಶೋಧಕರು, ಮನುಷ್ಯನ ಆಕರಕೋಶವನ್ನು (stem cell) ಬಾಹ್ಯಾಕಾಶ ನಿಲ್ದಾಣದ ಪ್ರಯೋಗಾಲಯಕ್ಕೆ ಕಳುಹಿಸಿ, ಅಲ್ಲಿನ ವಾತಾವರಣದಲ್ಲಿ